# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸರ್ಕಾರದ ನಿಯಮಗಳನ್ನು ಪಾಲಿಸದೆ ಸ್ವತ್ತುಗಳಿಗೆ ನಮೂನೆ-9 ಮತ್ತು ನಮೂನೆ-11ಬಿ ವಿತರಿಸಿರುವ ಬಗ್ಗೆ.- ಸಮಿತಿ ರಚನೆ ಬಗ್ಗೆ.

**ಪ್ರಸ್ತಾವನೆ:**

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ನೋಂದಣಿ, ಮಾರಾಟ ಮುಂತಾದ ವಹಿವಾಟುಗಳನ್ನು ತಡೆಗಟ್ಟುವ ಸಲುವಾಗಿ ಎನ್.ಐ.ಸಿ. ವತಿಯಿಂದ ಇ-ಸ್ವತ್ತು ತಂತ್ರಾಂಶ ರೂಪಿಸಿ ದಿ: 15-06-2013 ರಿಂದ ಜಾರಿಗೊಳಿಸಲಾಗಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಕ್ಕೆ ಅವಶ್ಯ ತಿದ್ದುಪಡಿಗಳನ್ನು ತರಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ನಿಗಧಿತ ನಮೂನೆ 9 ಹಾಗೂ 11 ಎ ರಲ್ಲಿ ಮತ್ತು ಕ್ರಮಬದ್ಧವಲ್ಲದ, ಆದರೆ ವಿಧಿಸಲಾದ ಕೆಲವು ಷರತ್ತುಗಳನ್ನು ಪೂರೈಸುವ ಆಸ್ತಿಗಳಿಗೆ ನಮೂನೆ 11 ಬಿ ರಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ಪಡೆದು ನೊಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಆಗುತ್ತಿರುವ ತೊಂದರೆ, ಮೋಸ ಹಾಗೂ ಅನಾನುಕೂಲತೆಗಳ ಕುರಿತು ಬಂದಿರುವ ದೂರುಗಳ ಹಿನ್ನೆಲೆಯಲ್ಲಿ, ನಿವೃತ್ತ ಭಾರತೀಯ ಆಡಳಿ ಸೇವೆ (ಐ.ಎ.ಎಸ್.,) ಅಧಿಕಾರಿಯಾದ ಶ್ರೀ ಗೋಪಾಲಕೃಷ್ಣೇಗೌಡ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ ಸಮಿತಿಯಿಂದ ಶಿಫಾರಸ್ಸು ಪಡೆಯಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 ಬೆಂಗಳೂರು, ದಿನಾಂಕ: 05-04-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಆಗುತ್ತಿರುವ ತೊಂದರೆ, ಮೋಸ ಹಾಗೂ ಅನಾನುಕೂಲತೆಗಳ ಕುರಿತು ಬಂದಿರುವ ದೂರುಗಳ ಹಿನ್ನೆಲೆಯಲ್ಲಿ, ನಿವೃತ್ತ ಭಾರತೀಯ ಆಡಳಿ ಸೇವೆ (ಐ.ಎ.ಎಸ್.,) ಅಧಿಕಾರಿಯಾದ ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ ಆದೇಶಿಸಿದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ, ಭಾ.ಆ.ಸೇ., (ನಿವೃತ್ತ) | ಅಧ್ಯಕ್ಷರು |
| 2 | ಶ್ರೀ ಕೆ. ಸುಬ್ರಾಯ ಕಾಮತ್, ಕ.ಆ.ಸೇ., (ನಿವೃತ್ತ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ. | ಸದಸ್ಯರು |
| 3 | ಶ್ರೀ ಎಸ್.ಎಸ್. ಕಟಗೇರಿ, (ನಿವೃತ್ತ) ಉಪ ನಿಬಂಧಕರು, ಸಹಕಾರ ಇಲಾಖೆ. | ಸದಸ್ಯರು |

**ಸಮಿತಿಯು ಪರಿಶೀಲಿಸಬೇಕಾದ ಅಂಶಗಳು ಹಾಗೂ ಷರತ್ತು ಮತ್ತು ನಿಬಂಧನೆಗಳು:**

1. ನಿವೃತ್ತ ಐ.ಎ.ಎಸ್. ಅಧಿಕಾರಿಯಾದ ಶ್ರೀ ಆರ್.ಬಿ. ಅಗವಾನೆ ರವರ ನೇತೃತ್ವದ ಸಮಿತಿ ವರದಿಯ ಮೇರೆಗೆ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ 5 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಾನೂನುಬಾಹಿರವಾಗಿ ನಮೂನೆ-11ಬಿ ವಿತರಿಸಿರುವುದಾಗಿ ವರದಿ ಮಾಡಿದ ಹಿನ್ನೆಲೆಯಲ್ಲಿ ಅವುಗಳನ್ನೆಲ್ಲಾ ರದ್ದುಪಡಿಸಿ ಆದೇಶಿಸಲಾಗಿದ್ದು, ಈ ಆದೇಶದಿಂದ ಬಾಧಿತರಾದವರಿಗೆ ನ್ಯಾಯ ದೊರಕಿಸಲು ಇರುವ ಮಾರ್ಗೋಪಾಯಗಳನ್ನು ಸೂಚಿಸುವುದು.
2. ಇ-ಸ್ವತ್ತು ಅನುಷ್ಠಾನಕ್ಕೆ ಹೊರಡಿಸಲಾಗಿರುವ ಮಾರ್ಗಸೂಚಿ ಕ್ಷೇತ್ರದ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಹಂತದಲ್ಲಿ ಎದುರಾಗುವ ವಾಸ್ತವಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವಶ್ಯವಿರುವ ಮಾರ್ಪಾಟುಗಳಿಗೆ ಸಲಹೆ ನೀಡುವುದು.
3. ಇದಕ್ಕೆ ಪೂರಕವಾಗಿ ಆಯ್ದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.
4. ಇ-ಸ್ವತ್ತು ಅನುಷ್ಠಾನದಲ್ಲಿ ಮಾರ್ಗಸೂಚಿ ಉಲ್ಲಂಘನೆ ಮಾಡಿ ಅಕ್ರಮವೆಸಗುವ ಪ್ರಕರಣಗಳು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ನಡೆದಿವೆ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವುದು.
5. ಸಮಿತಿಯು ಸರ್ಕಾರದ ಆದೇಶವಾದ 3 ತಿಂಗಳಲ್ಲಿ ವರದಿ ನೀಡುವುದು.
6. ಸಮಿತಿಯು ಕಾರ್ಯನಿರ್ವಹಿಸಲು ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯಲ್ಲಿ ಅವಶ್ಯವಿರುವ ವ್ಯವಸ್ಥೆಯೊಡನೆ ಕಛೇರಿ ಒದಗಿಸುವುದು.
7. ಸಮಿತಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ನಿಯಮ 451(1) ಮತ್ತು (2) ರನ್ವಯ ಗ್ರೂಪ್-ಎ ಮತ್ತು ಬಿ ಗಳಿಗೆ ನೀಡಲಾಗುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳ ದರಗಳನ್ನು ಭರಿಸತಕ್ಕದ್ದು.
8. ಇದಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ಪಂಚಾಯತ್ ರಾಜ್ ಅನುದಾನ (ಯೋಜನೆ) ದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಪಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ, ಭಾ.ಆ.ಸೇ., (ನಿವೃತ್ತ), ನಂ.5, ಕೃಷ್ಣಾ ಸ್ಮಿತ, 2ನೇ ಮುಖ್ಯ ರಸ್ತೆ, ಡೊಲ್ಲರ್ ಲೇ ಔಟ್, ಜೆ.ಪಿ. ನಗರ, 4ನೇ ಹಂತ, ಬೆಂಗಳೂರು-560078.
2. ಶ್ರೀ ಕೆ. ಸುಬ್ರಾಯ್ ಕಾಮತ್, ಕ.ಆ.ಸೇ., (ನಿವೃತ್ತ) ನಂ. 7/433, 5ನೇ ಕ್ರಾಸ್, ಬಸವನಗುಡಿ, ಶಿವಮೊಗ್ಗ.
3. ಶ್ರೀ ಎಸ್.ಎಸ್. ಕಟಗೇರಿ, (ನಿವೃತ್ತ) ನಂ. ಎಂಎಫ್-12/2, ಎಲ್ ಬ್ಲಾಕ್, ಸರ್ಕುಲಾರ್ ರಸ್ತೆ, ನಂದಿನಿ ಲೇ ಔಟ್, ಬೆಂಗಳೂರು-560096.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಇವರು ಸಮಿತಿ ಕಾರ್ಯನಿರ್ವಹಿಸಲು ಅವಶ್ಯ ವ್ಯವಸ್ಥೆಯೊಡನೆ ಕಛೇರಿ ಒದಗಿಸಲು ಕೋರಿದೆ.
5. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು,

**ಪ್ರತಿಗಳು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.